
## ಕಳೆದ ಸಂಚಿಕೆಯಲ್ಲಿ

ಆರು ತಿಂಗಳ ಬಳಿಕ ಬಂದು ಕಾಣುವೆನು ಎಂದು ಸಂಕಲ್ಪ ಮಾಡಿ, ನಿದ್ದೆಯಲ್ಲಿದ್ದ ಪತ್ನಿಯನ್ನು ತೊರೆದು ಅರ್ಜುನ ತನ್ನ ನಾಡಿಗೆ ಮರಳಿದ. ಎಚ್ಚೆತ್ತ ಚಿತ್ರಾ, ಹುಲಿ ಹಿಡಿದ ದನದ ಕರು ಕಂಗೆಟ್ಟಂತೆ ರೋದಿಸಿದಳು. ಕೊನೆಗೆ ದಿಕ್ಕು ಕಾಣದೆ, ತನ್ನ ಪರಿವಾರದೊಂದಿಗೆ 'ಗರ್ಭಿತ ರಹಸ್ಯ'ದೊಂದಿಗೆ ರಾಜ್ಯಕ್ಕೆ ಮರಳಿದಳು. ಮಗಳನ್ನು ಕಂಡ ತಂದೆ ತಾಯಿಗೆ ಸಂತೋಷವಾದರೂ, ಚಿತ್ರಾಳ ಅನ್ಯಮನಸ್ಕತೆಯನ್ನು ಕಂಡು ದುಗುಡ. ಮದುವೆಯ ಮಾತು ಮಗಳ ಸಖ್ಯದ ಗುಟ್ಟನ್ನು ರಟ್ಟಾಗಿಸಿತು.



ಹಗಲೇರಿ ಹಗಲು ಇಳಿಯುತ್ತ, ಇರುಳಾಗಿ ಇರುಳು ಹೋಗಿ, ಕಾಲ ಜೀವನ ಸೋರುತ್ತ ಜೀವನಾಂಜಲಿಯನ್ನು ಬರಿದಾಗಿಸಿತು. ಹೀಗೆ ನಿಂತ ತುದಿಬೆರಳಿನಲ್ಲಿ ಎನ್ನುವಂತೆ ಕಾಯ್ದ ಆ ಬಸುರಿ ರೋಷ ದುಃಖ ದ್ವಂದ್ವದಲ್ಲಿ ಬೆಂದು ಹೋದಳು. ಅತಿ ಭೀಷಣ ಮನಸ್ಥಿತಿಯಲ್ಲಿ ಮಣಿಪುರಕ್ಕೆ ಹಿಂದಿರುಗಿದಳು!

5

**ಹೂವಿಂದೆ ಸಾರ್ಥಕವಹುದು ಗಿಡದ**
**ಬಾಳಂತೆ ಬಾಳ್ಗಿಡಕೆ ಒಲುಮೆಯೆ ಹೂವು**

ಭೂಮಿಗಿಂತ ಮೊದಲು ಸೃಷ್ಟಿಯಾದ ಜಲದ ಆಶ್ರಯವೆ (ಮುನ್ನೀರು) ಸಾಗರವೆ ಉರುಳುರುಳು. ನೀನು ಶತಶತ ವರ್ಷಗಳುರುಳಿದರೂ ಅಳಿಯದ ಪ್ರೀತಿಯಿಂದ ಹರುಷ ಭೋಗದಲ್ಲಿ ಪೃಥ್ವಿಯನ್ನು ತೆರೆ ತೋಳುಗಳಿಂದ ಆಲಂಗಿಸಿರುವೆ! ನೀರ ನಿಧಿಯಾದ ನೀನು ಗಂಭೀರ ವಿಸ್ತಾರದ ಗಹನವೂ ಆಳವೂ ಉದಾತ್ತವೂ ಆದ ಸುರನೀಲ ಸುಂದರಮೂರ್ತಿ. ನಮ್ಮ ಈ ಧರಾ ದೇವಿಯು ಸೂರ್ಯನಿಂದ ಸಿಡಿದು ಬೆಂಕಿಯಲ್ಲಿ ಮಿಂದೆದ್ದಿತು. ಅದು ಹೆತ್ತ ಬಾಳಿಗೆ ಸುಖ ಹಿತ ಪ್ರೀತಿ ನೀಡಿದ ದಾನಿಯೇ ನಿನಗೆ ನಮೋ ನಮಃ!

ಗಡಿ ಮೀರಿ ವಿಸ್ತಾರವಾಗಿ ಬೆಳೆದ ನಿನ್ನ ದಡಕ್ಕೆ ಗುಡಿ ಗುಡಾರವೇಕೆ? ಅಲ್ಲಿ ಆತ್ಮದ ಬಯಕೆ ಬಳ್ಳಿಯು ಕುಡಿಚಾಚಿ ಹಬ್ಬುತ್ತ, ಕಾಲದೇಶದ ಮೊಟ್ಟೆಯನ್ನು ಒಡೆದು ಮೀಟಿ, ಅನಂತತೆಯನ್ನು ಹೀರಿ ಬ್ರಹ್ಮವನ್ನು ತಬ್ಬುವುದು! ನಿರಂತರ ಚೇತಸದ ಜಲಧಿಯೆ, ನಿನ್ನ ಮೊರೆಯು ಮಾನವನೆದೆಗೆ ಧೀರತೆಯ ಕಿಡಿಸೂಸಿ ಸಾಹಸಕ್ಕೆ ಎಳೆದೊಯ್ಯುವ ಕರೆಯಾಗಿದೆ. ರತ್ನಧಿಯೆ, ನರನ ನಾಗರಿಕತೆಯ ತೀರ್ಥಯಾತ್ರೆಯ ಮಹಾವಿಸ್ತಾರವಾದ ಜಲಪಥವೆ ಮೊರೆದು ಉರುಳು. ಅಲ್ಲೋಲ ಕಲ್ಲೋಲ ರುದ್ರಾಟ್ಟಹಾಸದಿಂದ ಮನೋಹರ ಹಾಗೂ ಭಯಂಕರ ಮೋಹವನ್ನೆರಚಿ ಬೀಸು!

ಮಣಿಪುರ ಸಮೀಪದಲ್ಲಿ ಅಂಬುಧಿ ಹಾಗೆ ಮೊರೆಯಿತು. ದೀರ್ಘವಾಗಿ ಹರಡಿಕೊಂಡಿದ್ದ ತೀರವನ್ನು ಅಪ್ಪಳಿಸಿ ಬಡಿಯಿತು. ಅದರ ಮಂಥನದಿಂದ, ನೊರೆಗರೆವ ಅಲೆಗಳಿಂದ ಮುತ್ತುಗಳೆದ್ದವು. ಬೃಹನ್ ರಾತ್ರಿಯ ಬೆಳುದಿಂಗಳ ತಪೋಮೂರ್ತಿ ತನ್ನ ಜಟಾಜೂಟದಲ್ಲಿ ಅಮೃತ ಕಿರಣಗಳನ್ನು ಮುಡಿದಿತ್ತು. ಅದು ನಿಶ್ಚಲಧ್ಯಾನ ನಿದ್ರೆಯಲ್ಲಿ ವಿಶ್ವವ್ಯಾಪಿ ತಾನಾಗಿತ್ತು.

ಕ್ಷಾತ್ರಕುಲ ರಮಣಿ ಚಿತ್ರಾಂಗದೆಯು ನಿರ್ಜನ ರಾತ್ರಿಯ ಆ ಸಮಯದಲ್ಲಿ ತನ್ನ ಬಾಳನ್ನು ಕೊಲೆಗೈಯಲು ಆಲೋಚಿಸುತ್ತ ಕಡಲತಡಿಗೆ ಬಂದಳು. ದಿಕ್ಪಾಲಕರಿಗೆ, ಗಗನ ದೇವತೆಗಳಿಗೆ, ವಾಯುವಿಗೆ, ಸಾಗರನಿಗೆ, ಶಶಿತಾರೆಗಳಿಗೆ ಕೈಮುಗಿದು ಹೀಗೆ ಪ್ರಾರ್ಥಿಸಿದಳು:

ಕ್ಷಮಿಸಿಮಪರಾಧಮಂ, ದುಃಖಾಗ್ನಿ ದಗ್ಧ ದುರ್ಬಲೆಯ ಈ ಪಾಪಮಂ!

'ಕರುಣ ದೇವತೆಗಳಿರ, ನೀವು ಲೋಕಸಾಕ್ಷಿಗಳು. ನನ್ನ ಕಾರ್ಯದ ಅವಿವೇಕವನ್ನು ಲೆಕ್ಕಿಸದೆ ಅದರ ಕಾರಣವಾದ ಅತಿ ದುಃಖಸಂಕಟವನ್ನು ಗಣಿಸಿ, ದುಃಖಾಗ್ನಿಯಿಂದ ದಹಿಸಿ ಹೋಗಿರುವ ಈ ದುರ್ಬಲೆಯ ಅಪರಾಧವನ್ನು ಕ್ಷಮಿಸಿ. ಈ ನರರ ಬದುಕಿನಲ್ಲಿ ಒಲುಮೆಗಿಂತಲು ಬೇರೆ ಪರಮಾರ್ಥವಿಲ್ಲ; ಹಾಗೂ ಒಲುಮೆ ಇಲ್ಲದ ಬಾಳು ಅರ್ಥಹೀನ. ಹೂವಿನಿಂದ ಸಾರ್ಥಕವಾಗುವುದು ಗಿಡದ ಬಾಳು. ಅದರಂತೆ ಬಾಳಿನ ಗಿಡಕ್ಕೆ ಒಲುಮೆಯೆ ಹೂವು. ಒಲಿದ ಒಲ್ಮೆ ಮರಳಿ ಒಲಿಯದಿದ್ದರೆ ಒಲುಮೆಗೆ ಅದೇ ಕೊಲೆ!

'ಮೊದಲೆ ಕೊಲೆಯಾಗಿರುವ ನನ್ನೆದೆಯನ್ನು ನಾನು ಇಂದು ಮತ್ತೆ ಕೊಲೆ ಮಾಡುವೆನೆ? ಕಳೇಬರವನ್ನು ಪಾವನ ಸರಿತ್ಪತಿ (ನದಿಗಳ ಒಡೆಯ) ಯ ವಿಸ್ತೃತವಾದ ಔದಾರ್ಯಕ್ಕೆ ಅರ್ಪಿಸುವೆ!'

ಲಾವಣ್ಯವತಿಯ ಕೆನ್ನೆಗಳಲ್ಲಿ ಕಣ್ಣ ಉಪ್ಪುನೀರಿನ ಹನಿಗಳು ಧಾರೆಯಾಗಿ ಹರಿಯುತ್ತಿರಲು, ನದಿ ಹರಿಯುವಂತೆ ಲವಣಸಿಂಧುವಿನ ಕಡೆಗೆ ನಡೆದಳು. ಅವಳು ನಡೆದುದೆ ತಡ ಲಕ್ಷೋಪಲಕ್ಷ ಹೆಡೆಗಳನ್ನೆತ್ತಿ ಭುಸ್ಸೆಂಬ ಸಾಸಿರ ಶಿರದ ಮಹಾಫಣಿಯಂತೆ ಸಾಗರವು ವಿಕ್ಷುಬ್ಧಗೊಂಡ ಅಲೆಗಳ ಉಚ್ಛ್ವಾಸದಿಂದ ಮುನಿದೆದ್ದಿತು. ಪ್ರೀತಿಯ ತಾಯಿಯು ಮಗಳನ್ನು ತಡೆಯುವಂತೆ ಗರ್ಭಗಾತಿನಿಯನ್ನು ನೂಕಿತು.

ತಕ್ಷಣ ಸಾಗರದ ಸಾರವೆ ತನ್ನ ಜಲದ ಆಕೃತಿಯನ್ನು ಇಲ್ಲವಾಗಿಸಿಕೊಂಡು ಶೋಭಿಸುವಂತೆ ಸಮುದ್ರಮೂರ್ತಿಯು ವಾರಿಧಿಯ ಮಧ್ಯೆ ಗೋಚರಿಸಿತು. ಅದು ಸರ್ವ ಸೌಂದರ್ಯದ ಸಾಕ್ಷಾತ್ಕಾರದಂತಿತ್ತು. ನವರತ್ನಗಳಿಂದ ಕೂಡಿದ ಚಿನ್ನದ ಕಿರೀಟದಿಂದ ಹೊಮ್ಮುವ ರಶ್ಮಿಯಿಂದ ಅದರ ಪರಿವೇಷ ಮಂಡಲವು ಬಣ್ಣ ಬಣ್ಣದ ಕಿರಣಗಳಿಂದ ಹೆಣೆದು ಪ್ರಕಾಶಿಸುತ್ತಿತ್ತು. ತರುಣ ಕೆಂಪುಶರೀರವು ತೇಜಸ್ಸಿನ ತೆರೆಯ ನೊರೆಮುತ್ತಿನಿಂದ ಮೆರೆಯುವ ನೀರಿನ ಅಂಬರದಿಂದ ಹೊರಸೂಸಿ ಹೊಳೆಯುತ್ತಿತ್ತು. ಅದರ ಸುತ್ತಲೂ ಎತ್ತೆತ್ತಲೂ ಸಮುದ್ರದ ಅಲೆಗಳೊಡನೆ ಮೋಡಗಳ ಗುಂಪು ಸ್ಪರ್ಧೆಯಿಂದ ನರ್ತನವನ್ನು ಮಾಡುತ್ತಿದ್ದವು.

ತಾವರೆ ಮುಖದ, ಮೀನ ನೇತ್ರಗಳ, ಆಮೆಯಂತಹ ಕೆನ್ನೆಯ ಚೆಲುವ ಶೈವಾಲ (ನೀರಿನ ಮೇಲೆ ಬೆಳೆಯುವ ಪಾಚಿ) ಶೃಂಗಾರದ ಅಂಬುಧಿಯ ಶ್ರೀಮೂರ್ತಿ ಗಂಭೀರ ಮೌನದಿಂದ ಕೂಡಿದ ನಿನಾದದಿಂದ ಹೀಗೆ ಘೋಷಿಸಿತು:

**ಮರ್ದಲ್ತು ಕೊಲೆ ವಿರಹಕ್ಕೆ**

'ಮಗಳೆ, ಸಾಹಸವನ್ನು ಮಾಡಬೇಡ. ನಿನ್ನ ನೆಲೆಗೆ ನಡೆ. ಕಡಲ ಒಡಲಿನ ಚಳಿಗಿಂತ ಬೆಚ್ಚನೆಯ ಮನೆಯ ಮಡಿಲೇ ಒಳ್ಳೆಯದು. ಕಾಣದಿರುವ ಸಾವಿಗಿಂತ ಕಣ್ಣೆದುರಿಗಿರುವ ನೋವು ತಾನಾಗದೆ ಸುಂದರ? ಮತ್ತು ವಿರಹಕ್ಕೆ ಕೊಲೆಯು ಮದ್ದಲ್ಲ. ನೀನು ಕೊನೆಯುಸಿರು ಎಳೆಯುವ ಮೊದಲು ನಿನ್ನ ಪತಿಯ ದರ್ಶನವಾಗುವುದು.

'ನಿಮ್ಮ ಪ್ರಣಯ ಸಾರಸರ್ವಸ್ವ ಶಿಶು ಸ್ವಾತಿಹನಿ ಮುತ್ತಾಗಿ ನಿನ್ನ ಒಡಲಿನಲ್ಲಿ ಬೆಳೆಯುತ್ತಿದೆ! ಬಾಳಿನ ಗಿಡಕ್ಕೆ ಪ್ರೀತಿಯು ಹೂ ಎಂದು ಹೇಳಿದೆಯಲ್ಲವೆ? ಅದು ನಿಜವಾದರೂ, ಮರಕ್ಕೆ ಹೂ ಅಲ್ಲದೆ ಹಣ್ಣು ಗುರಿಯಾಗಿರುವುದು. ಹಾಗೆ ಪ್ರಣಯ ಸಾಧನೆಗೆ ಶಿಶು ವಾತ್ಸಲ್ಯವೇ ಸಿದ್ಧಿ!

'ಮಿಡಿ ಬಂದ ಮಾವು ಹೂ ಹೋಯಿತೆಂದು ಅಳುತ್ತದೆಯೆ? ಫಲದ ಸಾಫಲ್ಯಕ್ಕೆ ಸುಮದ ಸೌಂದರ್ಯ ಬಲಿಯಾದಂತೆ ನೀರನೀರೆಯರ ಒಲುಮೆ ಕಂದನಾನಂದಕ್ಕೆ ಬಲಿಯಾಗುವುದು. ಹಸುಳೆಯ ಪ್ರೀತಿ ದಾಂಪತ್ಯ ಮಂದಿರಕ್ಕೆ ಗೋಪುರದ ಹೊಂಗಳಸ. ಅಲ್ಲದೆ ಗರ್ಭಗುಡಿಯಲ್ಲಿ ಪುಣ್ಯ ವೇದಿಕೆಯ ದೇವಮೂರ್ತಿ. ವತ್ಸ ವಾತ್ಸಲ್ಯವಿಲ್ಲದಿರುವ ವಿವಾಹ ವ್ಯರ್ಥ!

'ನಿನಗೆ ಮಗನು ಹುಟ್ಟುತ್ತಾನೆ. ಅವನನ್ನು ಮುದ್ದಿಸಿ ಲಾಲಿಸಿ ಪಾಲಿಸಿ ತಿದ್ದು! ನೀನು ಗುರುವಾಗಿ ಅವನಿಗೆ ರಾಜರ ಕಲೆಗಳನ್ನು ಕಲಿಸು! ಕೇಳಿ, ಎರಡು ಜೀವಗಳನ್ನು ಕಗ್ಗೊಲೆ ಮಾಡುವ ಈ ಸಾಹಸ ಬೇಡ. ಆ ಸಾಹಸವನ್ನು ಮಾಡಿ ಬದುಕು. ನಡೆ, ತಪಸ್ವಿನಿಯಾಗಿ ಕೀರ್ತಿಯನ್ನು ಪಡೆ!'

ಹೀಗೆಂದು ಹೇಳುತ್ತ ಆಶೀರ್ವಾದದ ಆ ವಾಣಿ ನಿಂತಿತು. ಕಣ್ತೆರೆದು ನೋಡಲು ಸಮುದ್ರ ಮೂರ್ತಿ ಕಾಣದಾಯಿತು. ಚಿತ್ರೆಯು ಕನಸಿನಿಂದ ಎಚ್ಚರಗೊಂಡಂತೆ ಮೈ ತಿಳಿದು, ನಿಧಾನವಾಗಿ ತನ್ನ ಮಂದಿರಕ್ಕೆ ಬಹು ವಿಧದ ಭಾವ ಭಾರದಲ್ಲಿ ನಡೆದಳು. ಅಂದು ಮೊದಲಾಗಿ ಆ ರಮಣಿ ತನ್ನ ಸುಪವಿತ್ರ ಭಾರವನ್ನು ತಾಯಾಗಿ ಹೊತ್ತು, ಪೂಜ್ಯ ಮನಸ್ಸಿನಿಂದ ಪೂಜೆಯೆಂದು ತಿಳಿದು ಕಾಪಾಡಿದಳು.

ಒಂಬತ್ತು ತಿಂಗಳು ತುಂಬಿ ಬರಲು ಹಸುಳೆಯು ಕತ್ತಲ ಆಕಾಶದಲ್ಲಿ ಚಂದ್ರನು ಪ್ರಕಾಶಿಸಿ ಹೊಮ್ಮಿ ಬರುವಂತೆ ಜನಿಸಿತು. ಜನಮನವು ಹಿಂದಿನ ಆಶಂಕೆಯನ್ನು ತೊರೆದು ಸಮುದ್ರ ಉಲ್ಲಾಸದಿಂದ ಚಿಮ್ಮಿ ಹೊರಹೊಮ್ಮಿತು. ತಾಯಿ ಹೇಳದಿದ್ದರೆ ಏನು? ಚಂದ್ರಸಮ ತೇಜಸ್ವಿ ಶಿಶು ತಾನು ತನ್ನ ವಂಶವನ್ನು ಹೇಳಿತು!

ಮತ್ತೋರ್ವನರ್ಜುನನೊ ಎನೆ ಬಭ್ರುವಾಹನಂ ಬೆಳೆದನಾ ತನ್ನ ನಾಡಿಗೆ ಕೋಂಟೆ ತಾನಾಗಿ

ಚಿತ್ರಾಂಗಿಯು ಕ್ಷತ್ರಿಯೋಚಿತವಾಗಿ